ವಿಶೇಷ ಆಯುಕ್ತರು (ಯೋಜನೆ)ರವರ ಕಛೇರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ನರಸಿಂಹರಾಜ ಚೌಕ, ಬೆಂಗಳೂರು-560002.

ಸಂಖ್ಯೆ: ವಿಆ(ಯೋ)/ಪಿಆರ್/ 529 /2017-18 ದಿನಾಂಕ: 2.5.2017

# ಕಛೇರಿ ಆದೇಶ

**ವಿಷಯ:-** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಓ.ಎಫ್.ಸಿಯನ್ನು ಹೆಚ್.ಡಿ.ಡಿ ಪದ್ಧತಿಯಲ್ಲಿ ಅಳವಡಿಸುವದರ ಜೊತೆಗೆ ಜಂಕ್ಷನ್ ಬಾಕ್ಸ್ ಮತ್ತು ಕಂಬಗಳನ್ನು ಅಳವಡಿಸಲು ಓ.ಎಫ್.ಸಿ ಸೇವಾ ಸಂಸ್ಥೆಗಳಿಗೆ ಅನುಮತಿ ನೀಡುವ ಬಗ್ಗೆ.

**ಉಲ್ಲೇಖ:-** ೧)ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ ಪತ್ರ ಸಂಖ್ಯೆ: DIT/SP1/A/AIRTEL/2005-06/992, ದಿನಾಂಕ: 27-01-2007.
೨)ವಿಶೇಷ ಆಯುಕ್ತರು (ಯೋಜನೆ)ಬೃ.ಬೆಂ.ಮ.ಪಾಲಿಕೆರವರ ಕಛೇರಿಯಿಂದ ಹೊರಡಿಸಲಾದ ಓ.ಎಫ್.ಸಿ ಅಳವಡಿಕೆಗೆ ಆನ್‌ಲೈನ್ ಮೂಲಕ ಅನುಮತಿ ನೀಡುವ ಕುರಿತು ಜರುಗಿದ ಸಭೆ ನಡುವಳಿ ದಿನಾಂಕ: 23-09-2016.
೩) ಮಾನ್ಯ ಆಯುಕ್ತರಿಂದ ಟಿಪ್ಪಣಿ ಹಾಳೆಯ ಕಂಡಿಕೆ (೨೫)ರಲ್ಲಿ ಅನುಮೋದಿಸಲ್ಪಟ್ಟ ಸಂಖ್ಯೆ: ಪಿಎಸ್(G)8685, ದಿನಾಂಕ: 22-03-2017.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಲ್ಲಿ ಓ.ಎಫ್.ಸಿ ಕೇಬಲ್ ಅಳವಡಿಸಲು ಈಗಾಗಲೇ ದರ ನಿಗಧಿಪಡಿಸಿ ಓ.ಎಫ್.ಸಿ ಸೇವಾ ಸಂಸ್ಥೆಗಳಿಂದ ಪಾಲಿಕೆಗೆ ನಿಗಧಿತ ಶುಲ್ಕ ಪಡೆದು ಅನುಮತಿ ನೀಡಲಾಗುತ್ತಿದೆ. ಪಾಲಿಕೆಯ ಕೆಲವು ರಸ್ತೆಗಳಲ್ಲಿ ಜಂಕ್ಷನ್ ಬಾಕ್ಸ್ ಮತ್ತು ಪೋಲ್‌ಗಳನ್ನು ಅಳವಡಿಸಲು ಅನುಮತಿ ನೀಡುವಂತೆ ದಿನಾಂಕ: 23-09-2016 ರಂದು ಆಯುಕ್ತರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಭಾರತಿ ಏರ್‌ಟೆಲ್ ಸಂಸ್ಥೆಯವರು ಪ್ರಸ್ತಾಪಿಸಿದ್ದರು ಮತ್ತು ಈಗಾಗಲೇ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನದ ಪತ್ರದಲ್ಲಿ ಸದರಿ ಜಂಕ್ಷನ್ ಬಾಕ್ಸ್ ಮತ್ತು ಪೋಲ್‌ಗಳನ್ನು ಅಳವಡಿಸಲು ಸೂಚಿಸಿರುವಂತೆ ಜಂಕ್ಷನ್ ಬಾಕ್ಸ್ ಮತ್ತು ಪೋಲ್‌ಗಳ ಅಳವಡಿಕೆಗೆ ದರ ನಿಗಧಿಗೊಳಿಸಿದ್ದು ಮಾನ್ಯ ಆಯುಕ್ತರು ದಿನಾಂಕ: 22-03-2017ರಂದು ಅನುಮೋದನೆ ನೀಡಿರುತ್ತಾರೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಓ.ಎಫ್.ಸಿ ಅಳವಡಿಸಿದ ಕೆಲವೊಂದು ರಸ್ತೆಗಳಲ್ಲಿ ಜಂಕ್ಷನ್ ಬಾಕ್ಸ್ ಮತ್ತು ಪೋಲ್‌ಗಳನ್ನು ಅಳವಡಿಸಲು ಈ ಕೆಳಗಿನಂತೆ ದರ ನಿಗಧಿಪಡಿಸಿ ಆದೇಶಿಸಲಾಗಿದೆ. ಪ್ರತಿ ಪೋಲ್ ಗೆ **ರೂ 1500/-** ಮತ್ತು ಪ್ರತಿ ಒಂದು ಜಂಕ್ಷನ್ ಬಾಕ್ಸ್‌ಗೆ **ರೂ 3000/-**-ಇತರೆ ಶುಲ್ಕಗಳು ಈ ಹಿಂದಿನಂತೆ ಇರುತ್ತದೆ. ಅಳವಡಿಕೆಗಾಗಿ ಪಾವತಿಸಿಕೊಳ್ಳುವ ಭದ್ರತಾ ಠೇವಣಿಯನ್ನು ಕಾಮಗಾರಿಯು ತೃಪ್ತಿಕರವಾಗಿ ನಿರ್ವಹಿಸಿದ ಮೂರು ತಿಂಗಳ ನಂತರ ಹಿಂದಿರುಗಿಸಲಾಗುವುದು. ಸದರಿ ದರವನ್ನು ಪ್ರತಿ ೩ ವರ್ಷದ ಅವಧಿಗೆ ಪರಿಷ್ಕರಿಸಲಾಗುವುದು.

**ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.**

2/5/17

**ವಿಶೇಷ ಆಯುಕ್ತರು (ಯೋಜನೆ)**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ